
ಫ್ಯಾಷನ್

# ಬೇಡಿಕೆ ಕುಂದದ ಕುಂದನ್ ಒಡವೆ!



**ಕುಂದನ್ ಆಭರಣಕ್ಕೆ ಬೇಡಿಕೆ ಎಂದೂ ಕುಂದುವುದಿಲ್ಲ. ಮದುವೆ, ಮುಂಜಿಗಳಂತಹ ಶುಭ ಸಮಾರಂಭಗಳಿಗೆ ಕುಂದನ್ ಒಡವೆ ಬಹಳ ಸೂಕ್ತವಾದದ್ದು. ಅಪ್ಪಟ ಬಂಗಾರದಿಂದ ತಯಾರಿಸಿದ ಕುಂದನ್ ಒಡವೆ ಸಾರ್ವಕಾಲಿಕ ಟ್ರೆಂಡ್ ಸೃಷ್ಟಿಸಿವೆ.**

■ **ರೂಪಾ ಕೆ.ಎಂ.**

ಸಾಲು ಸಾಲು ಮದುವೆಗಳು ಬಂತೆಂದರೆ ಕುಂದನ್ ಶೈಲಿಯ ಆಭರಣಕ್ಕೆ ಎಲ್ಲಿಲ್ಲದ ಬೇಡಿಕೆ. ಮೊದಲೆಲ್ಲ ಮದುವೆ, ಮುಂಜಿಗೆ ಬಂಗಾರವೆಂದರೆ ಅಪ್ಪಟ ಬಂಗಾರದ ಆಭರಣಗಳು ಬಳಕೆಯಾಗುತ್ತಿದ್ದವು. ಆದರೆ, ಈಗ ಏನೇ ಮಾಡಿದರೂ ಅದ್ದೂರಿತನಕ್ಕೆ ಪ್ರಾಶಸ್ತ್ಯ. ಹಾಗಾಗಿ ಧರಿಸುವ ಸೀರೆ ಇರಲಿ; ಅದಕ್ಕೊಪ್ಪುವ ಆಭರಣವೇ ಆಗಲಿ ಅದಕ್ಕೊಂದು ರಾಜಕಳೆ ಇರಲಿ ಎನ್ನುತ್ತದೆ ಫ್ಯಾಷನ್ ಲೋಕ.

ಸ್ವಲ್ಪ ದುಬಾರಿ ಎನಿಸಿದರೂ ತನ್ನ ಕುಸುರಿ ಕಲೆಯಿಂದಾಗಿ ಹೆಂಗಳೆಯರನ್ನು ಸೆಳೆಯುವ ಈ ಕುಂದನ್ ಆಭರಣವು ಮೊಘಲರ ಕೊಡುಗೆ. ನಾವೀನ್ಯ ಹಾಗೂ ಕುಸುರಿತನದಿಂದಲೇ ಇಂದಿಗೂ ಟ್ರೆಂಡ್ ಆಗಿ ಉಳಿದುಕೊಂಡಿದೆ.

ಸಾಮಾನ್ಯವಾಗಿ ಆಭರಣ ತಯಾರಿಕೆಯೆಂದರೆ; ಒಂದು ನಿರ್ದಿಷ್ಟ ವಿನ್ಯಾಸವನ್ನು ಯಂತ್ರಕ್ಕೆ ಅಳವಡಿಸಿದರೆ, ಅದು ಅಂಥಹುದೇ ಒಂದಷ್ಟು ಆಭರಣಗಳನ್ನು ಸೃಷ್ಟಿಸುತ್ತದೆ. ಆದರೆ, ಕುಂದನ್ ಆಭರಣದಲ್ಲಿ ವಿಚಾರದಲ್ಲಿ ಹಾಗಲ್ಲ. ವಿನ್ಯಾಸಕಾರರು ಸ್ವತಃ ಆಸ್ಥೆ ವಹಿಸಿ ಈ ಆಭರಣದ ವಿನ್ಯಾಸವನ್ನು ರೂಪಿಸುತ್ತಾರೆ. ಅದಕ್ಕೆ ತಕ್ಕಂತ ಹರಳುಗಳನ್ನು ಕೈಯಿಂದಲೇ ಜೋಡಿಸುತ್ತಾರೆ. ಹಾಗಾಗಿ ಇದು ತುಸು ದುಬಾರಿ.

ಕುಂದನ್ ಎಂದರೆ ಬೇರೆನಲ್ಲ ಕೆಂಪು, ಹಸಿರು ಮತ್ತು ಬಿಳಿ ಬಣ್ಣದ ಹರಳುಗಳನ್ನು ಚಿನ್ನದ ತೆಳು ಹಾಳೆಯಲ್ಲಿ ಕೂಡಿಸಲಾಗುತ್ತದೆ. ರಾಜಸ್ಥಾನ ಹಾಗೂ ಗುಜರಾತ್ ರಾಜಮನೆತನಗಳು ಇದನ್ನು ಹೆಚ್ಚು ಬಳಸುತ್ತಿದ್ದವು. ಈಗ ಇದು ಜನಸಾಮಾನ್ಯರನ್ನು ಆಕರ್ಷಿಸುತ್ತಿದೆ. ಕೆಲವು ವರ್ಷಗಳಿಂದೀಚೆಗೆ ಈ ವಿಧಾನವನ್ನು ಬೆಳ್ಳಿಯ ಲೋಹವನ್ನು ಬಳಸಿಯೂ ಪ್ರಯೋಗ ಮಾಡಲಾಯಿತು.

ನಾಜೂಕಿನಿಂದ ಆಕಾರ ಕೊಟ್ಟ, ಕತ್ತರಿಸದ ವಜ್ರಗಳು, ನಯಗೊಳಿಸಿದ ರತ್ನಗಳನ್ನು ಚಿನ್ನದಲ್ಲಿ ಕೂಡಿಸಿ ತಯಾರಿಸಲಾಗುತ್ತದೆ. ವಿನ್ಯಾಸದ ನಂತರ ವ್ಯಾಕ್ಸ್‌ನ ಅಚ್ಚು ತಯಾರಿಸಿ, ಬಳಸಲಾಗುತ್ತದೆ. ಕೂಡಿಸುವಿಕೆಯಲ್ಲಿಯೂ ವ್ಯಾಕ್ಸ್ ಬಳಕೆ ಇರುತ್ತದೆ.